# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2023-24ನೇ ಸಾಲಿನಲ್ಲಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವ 3ನೇ ಕಂತಿನ ಅನುದಾನವನ್ನು SNA ಖಾತೆಗೆ ವರ್ಗಾವಣೆ ಮಾಡಿ ನಿಯಮಾನುಸಾರ ಸರ್ಕಾರದ ಸಂಚಿತ ನಿಧಿಗೆ ಹಿಂಪಾವತಿಸುವ ಬಗ್ಗೆ.

ಉಲ್ಲೇಖ:

1. ಆರ್ಥಿಕ ಇಲಾಖೆ, ಭಾರತ ಸರ್ಕಾರ ರವರ ಅಧಿಕೃತ ಜ್ಞಾಪನ ಸಂಖ್ಯೆ: 1(13)PFMS/FCD/2020 ದಿನಾಂಕ: 23.03.2021
2. ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ ರವರ ಟಿಪ್ಪಣಿ ಸಂಖ್ಯೆ : ಆಇ 539 ವೆಚ್ಚ-07/2023 ದಿನಾಂಕ: 25.05.2023.
3. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ /11/ಕೆಎಟಿ/ಎಸ್‌ಎಸ್‌ಪಿ/2024, ದಿನಾಂಕ:24.01.2024.
4. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ /11/ಕೆಎಟಿ/ಎಸ್‌ಎಸ್‌ಪಿ/2024, ದಿನಾಂಕ:13.03.2024.
5. ಜಂಟಿ ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಇಲಾಖೆ ಭಾರತ ಸರ್ಕಾರ ರವರ ಆದೇಶ ಸಂಖ್ಯೆ:J-12022/1/2014-NSAP, ದಿನಾಂಕ: 30.03.2024.
6. ಜಂಟಿ ಕಾರ್ಯದರ್ಶಿ (ಎಫ್ ಆರ್ & ಬಿ.ಸಿ.ಸಿ.), ಆರ್ಥಿಕ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 443 ವೆಚ್ಚ-7/2024, ದಿನಾಂಕ: 02.04.2024

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಕೇಂದ್ರ ಸರ್ಕಾರದ ಆದೇಶದಲ್ಲಿ ಸಾಮಾಜಿಕ ನೆರವು ಯೋಜನೆಯಡಿ ಬಿಡುಗಡೆಯಾಗುವ ಅನುದಾನಕ್ಕೆ ಪ್ರತ್ಯೇಕ SNA ಖಾತೆಗಳನ್ನು ತೆರೆದು SNA ಮುಖಾಂತರ PFMS ನಲ್ಲಿ ಅನುದಾನ ನಿರ್ವಹಣೆ ಮಾಡಬೇಕೆಂದು ನಿರ್ದೇಶನವಿರುತ್ತದೆ. ಈ ಸಂಬಂಧ 4 ರಾಷ್ಟ್ರೀಯ ಸಾಮಾಜಿಕ ನೆರವು ಯೊಜನೆಗಳಿಗೆ ಪ್ರತ್ಯೇಕ SNA ಖಾತೆ ತೆರೆಯಲಾಗಿರುತ್ತದೆ ಹಾಗೂ ಕೇಂದ್ರ ಸರ್ಕಾರದಿಂದ ಈ ಅನುದಾನವನ್ನು ನಿರೀಕ್ಷಿಸಿ ರಾಜ್ಯ ಸರ್ಕಾರದಿಂದ ಸಾಮಾಜಿಕ ನೇರವು /ಭದ್ರುತೆ ಯೋಜನೆಗಳಿಗೆ ವೆಚ್ಚವನ್ನು ಭರಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆರ್ಥಿಕ ಇಲಾಖೆಯ ನಿರ್ದೇಶದನ್ವಯ ರಾಜ್ಯದ ಪಾಲಿನ ಅನುದಾನದಲ್ಲಿ ನಿಗಧಿಪಡಿಸಿರುವ ಲೆಕ್ಕಶಿರ್ಷಿಕೆಗಳಿಂದ ಎಲ್ಲಾ ಫಲಾನುಭವಿಗಳಿಗೆ ಪಿಂಚಣಿ ಪಾವತಿ ಮಾಡುವಂತೆ ಹಾಗೂ ಕೇಂದ್ರದ ಪಾಲಿನ ಅನುದಾನ ಸ್ವೀಕೃತವಾದ ತಕ್ಷಣ ಸದರಿ ಅನುದಾನವನ್ನು SNA ಖಾತೆಗೆ ವರ್ಗಾವಣೆ ಮಾಡಿ ಸರ್ಕಾರದ ಸಂಚಿತ ನಿಧಿಗೆ ಹಿಂಪಾವತಿಸಲು ನಿರ್ದೇಶನವಿರುತ್ತದೆ.

G. N. Susheela

Scanned with OKEN Scanner

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಸರ್ಕಾರದ ಆದೇಶದಲ್ಲಿ, ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿ ಕೇಂದ್ರ ಸರ್ಕಾರದಿಂದ 3 ಯೋಜನಗಳಿಗೆ 2023-24ನೇ ಸಾಲಿನಲ್ಲಿ 1 ನೇ ಕಂತಿನ ಅನುದಾನ ಹಾಗೂ 2022-23ನೇ ಸಾಲಿನ ಬಾಕಿ ಅನುದಾನ ರೂ.19395.72 ಲಕ್ಷಗಳ ಮತ್ತು ಕ್ರಮ ಸಂಖ್ಯೆ(4) ರ ಆದೇಶದಲ್ಲಿ ರೂ.12828.35ಗಳ ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿಸಿದೆ.

ರಾಷ್ಟ್ರೀಯ ಸಾಮಾಜಿಕ ನೆರವು(NSP) ಯೋಜನೆಯಡಿ ಕರ್ನಾಟಕ ರಾಜ್ಯಕ್ಕೆ ರೂ.531.84 ಕೋಟಿಗಳ ಅನುದಾನವನ್ನು ನಿಗಧಿಪಡಿಸಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ(5) ರ ಕೇಂದ್ರ ಸರ್ಕಾರದ ಆದೇಶದಲ್ಲಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿ ಕೇಂದ್ರ ಸರ್ಕಾರದಿಂದ ಪುರಸ್ಕೃತಗೊಂಡ ಯೋಜನೆಗಳಿಗೆ 2023-24 ನೇ ಸಾಲಿನಲ್ಲಿ 3 ನೇ ಕಂತಿನ ಅನುದಾನ ರೂ.12828.33 ಲಕ್ಷಗಳನ್ನು ಹಾಗೂ ಬಿಡುಗಡೆಗೊಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ಕೇಂದ್ರ ಸರ್ಕಾರದಿಂದ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಯ ಕೇಂದ್ರ ಪುರಸ್ಕೃತ ಯೋಜನೆಗಳಿಗೆ 2023-24ನೇ ಸಾಲಿನ 3ನೇ ಕಂತಿನ ಅನುದಾನವಾಗಿ ರೂ. 12828.33ಲಕ್ಷಗಳು ಬಿಡುಗಡೆಯಾಗಿರುವ ಹಿನ್ನಲೆಯಲ್ಲಿ ಈ ಮೊತ್ತವನ್ನು 2024-25ನೇ ಸಾಲಿಗೆ ಕೇಂದ್ರ ಪುರಸ್ಕೃತ ಯೋಜನೆಯ ಲೆಕ್ಕಶೀರ್ಷಿಕೆಗಳಡಿ ನಿಗದಿ ಪಡಿಸಿರುವ ಮೊತ್ತದಿಂದ ಬಿಡುಗಡೆಗೊಳಿಸಿ SNA ಖಾತೆಗೆ ವರ್ಗಾಯಿಸಿ ತದನಂತ ಸದರಿ ಮೊತ್ತವನ್ನು ಸಂಚಿತ ನಿಧಿಗೆ ಮರುಭರಣ ಮಾಡುವಂತೆ ಆಡಳಿತ ಇಲಾಖೆಗೆ ತಿಳಿಸಿರುತ್ತಾರೆ.

ಆದರಂತೆ, ಕೇಂದ್ರ ಸರ್ಕಾರವು ಬಿಡುಗಡೆಗೊಳಿಸಿರುವ ಅನುದಾನವನ್ನು SNA ಖಾತೆಗೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರದ ಸಂಚಿತ ನಿಧಿಗೆ ಹಿಂಪಾವತಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : RD /11 /KAT/SSP 2024, ಬೆಂಗಳೂರು,**
**ದಿನಾಂಕ:04.04.2024**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿ ಕೇಂದ್ರ ಸರ್ಕಾರದಿಂದ ಈ ಕೆಳಕಂಡ 3 ಯೋಜನೆಗಳಿಗೆ 2023-24ನೇ ಸಾಲಿನ ಅಕ್ಟೋಬರ್-2023 ರಿಂದ ಡಿಸೆಂಬರ್-2023ರವರೆಗಿನ 3ನೇ ಕಂತಿನ ರೂ.12828.33 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಸದರಿ ವಿವರ ಈ ಕೆಳಕಂಡಂತಿದೆ.

| 2023-24 3rd Qtr Fund Release Details | | | |
|---|---|---|---|
| | | | (in.Rs.Lakhs) |
| # | Scheme Name | 3 rd Qtr Fund Release2023-24 | Total Release |
| 1 | Indira Gandhi National Old Age Pension Scheme (IGNOAPS) | 5787.66 | 5787.66 |
| 2 | Indira Gandhi National Old Age Pension Scheme (IGNOAPS)-SC | 1577.34 | 1577.34 |
| 3 | Indira Gandhi National Old Age | 857.52 | 857.52 |

Scanned with OKEN Scanner

| | | | |
|---|---|---|---|
| | Pension Scheme (IGNOAPS)-Tribal | | |
| Total | | **8222.52** | **8222.52** |
| 4 | Indira Gandhi National Widow Pension Scheme (IGNWPS) | 3256.31 | 3256.31 |
| 5 | Indira Gandhi National Widow Pension Scheme (IGNWPS)-SC | 473.99 | 473.99 |
| 6 | Indira Gandhi National Widow Pension Scheme (IGNWPS)-Tribal | 459.99 | 459.99 |
| Total | | **4190.29** | **4190.29** |
| 7 | Indira Gandhi National Disability Pension Scheme (IGNDPS) | 336.17 | 336.17 |
| 8 | Indira Gandhi National Disability Pension Scheme (IGNDPS)-SC | 46.91 | 46.91 |
| 9 | Indira Gandhi National Disability Pension Scheme (IGNDPS)-Tribal | 32.44 | 32.44 |
| Total | | **415.52** | **415.52** |
| Grand Total | | **12828.33** | **12828.33** |

ಮೇಲ್ಕಂಡ ಪಟ್ಟಿಯಲ್ಲಿ ನಮೂದಿಸಿರುವಂತೆ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ **ಒಟ್ಟು ರೂ.12828.33 ಲಕ್ಷಗಳನ್ನು** ಯೋಜನಾವಾರು ಪ್ರಸಕ್ತ SNA ಖಾತೆಗಳಿಗೆ ಬಿಡುಗಡೆ ಮಾಡಿ ಆದೇಶಿಸಿದೆ ಹಾಗೂ ಸದರಿ ಅನುದಾನ SNA ಖಾತೆಗೆ ಜಮೆಯಾದ ತಕ್ಷಣ ಆರ್ಥಿಕ ಇಲಾಖೆಯು ಸೂಚಿಸಿರುವಂತೆ ರಾಜ್ಯ ಸಂಚಿತ ನಿಧಿಗೆ ಹಿಂಪಾವತಿಸಲು ಕೂಡಲೇ ನಿಯಮಾನುಸಾರ ಕ್ರಮವಹಿಸುವಂತೆ ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಈ ಕೆಳಕಂಡ ಷರತ್ತು ನಿಬಂಧನೆಗಳ ಪಾಲನೆಗೆ ಒಳಪಟ್ಟು ಆದೇಶಿಸಿದೆ.

ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಬೆಂಗಳೂರು ಇವರು ಪಾಲಿಸಬೇಕಾದ ಷರತ್ತುಗಳು-

1. ಈ ಆದೇಶದಲ್ಲಿ ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿ ಬಿಡುಗಡೆಯಾದ ಅನುದಾನವನ್ನು ರಾಜ್ಯ ಸಂಚಿತ ಲೆಕ್ಕಶೀರ್ಷಿಕೆಗಳಿಗೆ ಮರುಭರಣ ಮಾಡಲು ಮಾತ್ರ ಉಪಯೋಗಿಸತಕ್ಕದ್ದು.
2. ಜಮೆ ಹಾಗೂ ಮರು ಹೊಂದಾಣಿಕೆಯ ವಿವರಗಳನ್ನು PFMS ತಂತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
3. ಈ ಯೋಜನೆಗಳ ಅಂಕಿ ಅಂಶಗಳ ವರದಿಯ ಜೊತೆಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಕೂಡಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಸರ್ಕಾರಕ್ಕೆ ಸಲ್ಲಿತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ ವೆಚ್ಚ-7/2024, ದಿನಾಂಕ: 02.04.2023ರಲ್ಲಿ ತಿಳಿಸಿರುವಂತೆ ಹಾಗೂ ಸರ್ಕಾರದ ಪ್ರಧಾನ

Scanned with OKEN Scanner

ಕಾರ್ಯದರ್ಶಿ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ, ನೋಂದಣಿ & ಮುದ್ರಾಂಕ, ಸಾಮಾಜಿಕ ಭದ್ರತೆ & ಪಿಂಚಣಿಗಳು) ಇವರಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

G. N. Susheela 4/4/2024
**(ಜಿ.ಎನ್.ಸುಶೀಲ)**
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ(ಕೆ.ಎ.ಟಿ, ಬಾ.ನಿ ಮತ್ತು
ಸಾ.ಭ&ಪಿಂಚಣಿಗಳ ನಿರ್ದೇಶನಾಲಯ)

**ಇವರಿಗೆ:**

1. ಮಹಾಲೇಖಪಾಲರು(ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯ, ಕಂದಾಯ ಭವನ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿಗಳು(ವೆಚ್ಚ-7&8), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಆಯುಕ್ತರು, ಖಜಾನೆ ಇಲಾಖೆ, ವಿ.ವಿ ಗೋಪುರ, ಅಂಬೇಡ್ಕರ್ ವೀದಿ,ಬೆಂಗಳೂರು.
5. ಆಯುಕ್ತರು, ಖಜಾನೆ ಆಯುಕ್ತಾಲಯ, ಕೆ.ಪಿಎಲ್.ಸಿ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು.
6. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
7. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

**ಪ್ರತಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ವಿ.ನಿ, ನೋ & ಮು, ಡಿಎಸ್ಎಸ್‌ಪಿ) ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ)
   ಆರ್ಥಿಕ ಇಲಾಖೆರವರ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು(ಕೆ.ಎ.ಟಿ., ಬಾ.ನಿ ಮತ್ತು ಡಿಎಸ್ಎಸ್‌ಪಿ).

Scanned with OKEN Scanner